ದಿನಾಂಕ 11-1-2016 ರಂದು ಬೆಳಿಗ್ಗೆ 11.00 ಗಂಟೆಗೆ ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಮಂಜುನಾಥ ಪ್ರಸಾದ | ಸದಸ್ಯರು |
| 3. | ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 4. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 5. | ಶ್ರೀ ಕೆ.ಎಸ್. ವರಪ್ರಸಾದ | ಸದಸ್ಯರು |
| 6. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 7 | ಶ್ರೀ ಕೆ.ಎಂ. ವೀರಯ್ಯ | ಸದಸ್ಯರು |
| 8. | ಡಾ. ಡಿ.ಎಂ. ಚಂದರಗಿ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ–1 | **ದಿನಾಂಕ 19-9-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ನಾಲ್ಕನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br>**ಠರಾವು:**<br>ದಿನಾಂಕ 19-9-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ನಾಲ್ಕನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು.<br>**(ಕ್ರಮ: ಕುಲಸಚಿವರು)** |
| ಐಟಂ–2 | **ದಿನಾಂಕ 19-9-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ನಾಲ್ಕನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br>**ಠರಾವು:**<br>ದಿನಾಂಕ 19-9-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ನಾಲ್ಕನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು ನಮೂದಿಸಲು ಶ್ರೀ ಕೆ.ಎಂ. ವೀರಯ್ಯ, ಉಪ-ಕಾರ್ಯದರ್ಶಿಗಳು (ಹಣಕಾಸು) ಅವರು ಸಲಹೆ ನೀಡಿದರು.<br>ಕಾರ್ಯಸೂಚಿ ಸಂಖ್ಯೆ. 12 ಕ್ಕೆ ಅನುಮೋದಿಸುತ್ತ, ರೂ. 10.00 ಲಕ್ಷಗಳಿಗೆ ಮೀರಿದ ಎಲ್ಲಾ ಸಿವಿಲ್ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ಹಾಗೂ ಅನಮೋದನೆಯನ್ನು ಸೂಕ್ತ ಪ್ರಾಧಿಕಾರದಿಂದ / ಕೆ.ಪಿ.ಡಬ್ಲ್ಯೂಡಿ. ಯಿಂದ ಪಡೆಯಲು ಸಲಹೆ ನೀಡಿದರು. **(ಕ್ರಮ: ಕುಲಸಚಿವರು)**<br>ಇತರೇ ವಿಷಯಗಳ ಚರ್ಚೆಯಡಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಅಂತರ ರಾಷ್ಟ್ರೀಯ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ಸರಕಾರದಿಂದ ಅನುಮೋದನೆ ದೊರೆತ ನಂತರವೇ ಕ್ರಮಕೈಗೊಳ್ಳಲು ಸಲಹೆ ನೀಡಲಾಯಿತು. ಬೆಲ್ ಕಂಪನಿಯ ಪ್ರತಿನಿಧಿಯವರಿಂದ ಕೃವಿವಿ ರಾಯಚೂರಿನಲ್ಲಿ ಐ.ಟಿ. ಸೊಲ್ಯೂಶನ್ಸ್ ಮತ್ತು ಅಪ್ಲಿಕೇಶನ್‌ಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಇ-ಆಡಳಿತ, ಕರ್ನಾಟಕ ಸರಕಾರ / ಕಿಯೋನಿಕ್ಸ್‌ಗೆ ಸಲ್ಲಿಸಲು ಮಾನ್ಯ ಸದಸ್ಯರು ಹಾಗೂ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ಸಲಹೆ ನೀಡಿದರು.<br>**(ಕ್ರಮ: ಕುಲಸಚಿವರು)** |

**ಐಟಂ–3** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವಕ್ಕೆ ಪ್ರಸ್ತಾಪಿಸಿದ ಅತಿಥಿಗಳ ಯಾದಿಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**(ಕ್ರಮ: ಕುಲಸಚಿವರು)**

**ಐಟಂ–4** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯು ಒಪ್ಪಿಗೆ ನೀಡಿದ ವಿವಿಧ ಐಟಂಗಳಿಗೆ ಅನುಮೋದನೆ ಕುರಿತು**

**4.1** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013–14 ನೇ ಸಾಲಿನ ಲೆಕ್ಕ ಪರಿಶೋಧಿತ ವಾರ್ಷಿಕ ಖರ್ಚು–ವೆಚ್ಚಗಳು, ಲೆಕ್ಕ ಪರಿಶೋಧನಾ ವರದಿಗಳು ಹಾಗು ಅನುಸರಣಾ ವರದಿಗಳಿಗೆ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ವರದಿಯ ಕಂಡಿಕೆ 32, 33, 34, 36 ಮತ್ತು 37 ನ್ನು ಹೊರತುಪಡಿಸಿ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡುತ್ತಾ, ಇದಕ್ಕೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ವಿಶೇಷ ಸಭೆಯನ್ನು ಆದಷ್ಟು ಬೇಗನೆ ಕೃವಿವಿ ರಾಯಚೂರಿನಲ್ಲಿ ಕರೆಯಲು ಹಾಗೂ ಹಣಕಾಸು ಸಮಿತಿಯ ಸಭೆಯನ್ನು ಜರುಗಿಸುವುದಕ್ಕಿಂತ ಮುಂಚೆ ಮೇಲೆ ತಿಳಿಸಿದ ಕಂಡಿಕೆಗಳಿಗೆ ವಿವರಣೆಗಳನ್ನು ಉಪ–ಕಾರ್ಯದರ್ಶಿಗಳು (ಹಣಕಾಸು) ಅವರ ಅವಗಾಹನೆಗೆ ತರಲು ಸಲಹೆ ನೀಡಿತು.

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)**

**4.2** **ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಹಾಗೂ ನಿವೃತ್ತಿ ಹೊಂದಿದ ಶಿಕ್ಷಕರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.**

**ಠರಾವು:**

ಚರ್ಚೆಯ ನಂತರ, ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಹಾಗೂ ನಿವೃತ್ತಿ ಹೊಂದಿದ ಶಿಕ್ಷಕರ ಮಾಸಿಕ ಗೌರವಧನವನ್ನು ಈ ಕೆಳಗೆ ನಮೂದಿಸಿದಂತೆ ಹೆಚ್ಚಿಸಲು ಘನ ವೇದಿಕೆಯು ಅನುಮೋದನೆ ನೀಡಿತು.

| ಕ್ರ. ಸಂ. | ವಿಷಯ | ಪ್ರಸ್ತುತ ಮೊತ್ತ (ರೂ.) ಪ್ರತಿ ತಿಂಗಳು | ಹೆಚ್ಚಿಸಿದ ಮೊತ್ತ (ರೂ.) ಪ್ರತಿ ತಿಂಗಳು |
|---|---|---|---|
| 1 | ಕೃಷಿ ವಿಜ್ಞಾನಗಳಲ್ಲಿ ಸ್ನಾತಕ ಪದವೀಧರರು | 18,000/– | 25,000/– |
| 2 | ಕೃಷಿ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವೀಧರರು | 22,000/– | 30,000/– |
| 3 | ಕೃಷಿ ವಿಜ್ಞಾನಗಳಲ್ಲಿ ಪಿ.ಹೆಚ್.ಡಿ. ಪದವೀಧರರು / ನಿವೃತ್ತಿ ಶಿಕ್ಷಕರು | 25,000/– | 35,000/– |

**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)**

**4.3** **2015–16 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಅನುಮೊದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃವಿವಿ ರಾಯಚೂರಿನಲ್ಲಿ 2015–16 ನೇ ಸಾಲಿಗಾಗಿ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ರೂ. 349.00 ಲಕ್ಷಗಳ ಹಣಕಾಸಿನ ಅನುದಾನಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು.

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ))**

**4.4** **ಕೃಷಿ ಸಂಶೋಧನಾ ಕೇಂದ್ರ ಬೀದರನಲ್ಲಿ ಮಾರಾಟವಾಗದೇ ಉಳಿದ ಬೀಜವನ್ನು ಧಾನ್ಯವಾಗಿ ಪರಿವರ್ತನೆ ಮಾಡಿ ಮಾರಾಟ ಮಾಡಲು ಪ್ರಸ್ತಾವನೆ**

**ಠರಾವು:**

ಚರ್ಚೆಯ ನಂತರ, ಕೃಷಿ ಸಂಶೋಧನಾ ಕೇಂದ್ರ ಬೀದರನಲ್ಲಿ ಮಾರಾಟವಾಗದೇ ಉಳಿದ 873.80

| | |
|---|---|
| | ಕ್ವಿಂಟಲ್ ಸೋಯಾ ಅವರೆ / ಜೆ.ಎಸ್.–335 ಬೀಜವನ್ನು ಧಾನ್ಯವಾಗಿ ಪರಿವರ್ತನೆ ಮಾಡಿ ಮಾರಾಟ ಮಾಡಲು ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ))** |
| 4.5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ವೈದ್ಯಕೀಯ ವೆಚ್ಚದ ಬಿಲ್ಲುಗಳಿಗೆ ಮೇಲುರುಜು / ಪರಿಶೀಲನೆಯನ್ನು ಜಿಲ್ಲಾ ಆರೋಗ್ಯಾಧಿಕಾರಿಗಳವರಿಂದ ಮಾಡಿಸುವುದರ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ರೂ. 25,000/– ಗಿಂತ ಹೆಚ್ಚಿನ ಮೊತ್ತದ ಬಿಲ್ಲುಗಳಿಗೆ ಪರಿಶೀಲನೆ / ಮೇಲುರುಜು ಆದ ನಂತರ ಹಣಕಾಸು ಸಮಿತಿಯ ಸಭೆಯಲ್ಲಿ ಮಂಡಿಸಬಹುದು ಮತ್ತು ಪ್ರಾಮುಖ್ಯತೆಯ (genuinity) ಆಧಾರದ ಮೇಲೆ ಘನ ವೇದಿಕೆಯ ಅನುಮೋದನೆಗಾಗಿ ಸಲ್ಲಿಸಲಾಗುವುದು. ಮುಂದುವರೆದು, ಸಿಬ್ಬಂದಿಗಳನ್ನು ವೈದ್ಯಕೀಯ ವಿಮೆಯ ಕಡೆಗೆ ಪ್ರೇರೆಪಿಸಲು ಘನ ವೇದಿಕೆಯು ಸಲಹೆ ನೀಡಿತು.<br>**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| 4.6 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೆ.ಪಿ.ಡಬ್ಲ್ಯೂ.ಡಿ. ಅಥಾವ ಸೂಕ್ತ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಹಾಗೂ ಅನುಮೋದನೆ ಪಡೆಯುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕಾಮಗಾರಿ ಸಮಿತಿಯು ಒಪ್ಪಿಗೆ ನೀಡಿದ ವಿವಿಧ ಐಟಂಗಳಿಗೆ ಅನುಮೋದನೆ ಕುರಿತು** |
| 5.1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–6 | **ಕೃಷಿ ಮಹಾವಿದ್ಯಾಲಯ ಕಲಬುರಗಿಯ ಗ್ರಂಥಾಲಯ ಕಟ್ಟಡದ ಕಾಮಗಾರಿಯ ಪರಿಷ್ಕ್ರತ ಅಂದಾಜು ಮೊತ್ತಕ್ಕೆ ಅನುಮೋದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ ಕಲಬುರಗಿಯ ಗ್ರಂಥಾಲಯ ಕಟ್ಟಡದ ಕಾಮಗಾರಿಯ ಪರಿಷ್ಕೃತ ಅಂದಾಜಿನ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–7 | **ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರ ನ್ವಯ ನಿರ್ಧಿಷ್ಟಪಡಿಸಿದ ಸೌಲಭ್ಯಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅರ್ಹ ದಿನಗೂಲಿ ನೌಕರರಿಗೆ ಮಂಜೂರು ಮಾಡುವ ಪ್ರಸ್ತಾವನೆಗೆ ಅನುಮೋದನೆ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಅನುಷ್ಠಾನಗೊಳಿಸುವ ಸಲಹೆಯೊಂದಿಗೆ ಸದರಿ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ಕುಲಸಚಿವರು)** |

| | |
|---|---|
| ಐಟಂ– 8 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ / ವಿಜ್ಞಾನಿ ಸಿಬ್ಬಂದಿಯವರು ಸಲ್ಲಿಸಿದ ರಾಜಿನಾಮೆಯನ್ನು ಅಂಗೀಕರಿಸುವ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿ ನಿಯಮಾವಳಿಗಳನುಸಾರ ಶಿಕ್ಷಕ / ವಿಜ್ಞಾನಿ ಸಿಬ್ಬಂದಿಯವರು ಸಲ್ಲಿಸಿದ ರಾಜಿನಾಮೆಯನ್ನು ನೇಮಕಾತಿ ಪ್ರಾಧಿಕಾರದಿಂದ ಅಂಗೀಕಾರ ಪಡೆಯಲು ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. ಆದಾಗ್ಯೂ ರಾಜಿನಾಮೆಯನ್ನು ಹಿಂಪಡೆಯುವ ಅರ್ಜಿಗೆ ಅನುಮೋದನೆ ನಿರಾಕರಿಸಿತು. **(ಕ್ರಮ: ಕುಲಸಚಿವರು)** |
| ಐಟಂ– 9 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೌಶಲ್ಯ ಭರಿತ (Skill Based) ಗ್ರೂಪ್–ಸಿ ಮತ್ತು ಡಿ ಹುದ್ದೆಗಳ ನೇಮಕಾತಿಗಾಗಿ ಪ್ರಾಯೋಗಿಕ ಪರೀಕ್ಷೆಗೆ ಅಬ್ಯರ್ಥಿಗಳ ಅನುಪಾತ 1:10 ರ ಬದಲಾಗಿ 1:20 (ರಿಕ್ತ ಸ್ಥಾನ : ಅಬ್ಯರ್ಥಿ) ನಿಗದಿಪಡಿಸಿದ್ದನ್ನು ಸ್ಥಿರೀಕರಿಸುವ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಗ್ರೂಪ್–ಸಿ ಮತ್ತು ಡಿ ಹುದ್ದೆಗಳ ನೇಮಕಾತಿಗಾಗಿ ಪ್ರಾಯೋಗಿಕ ಪರೀಕ್ಷೆಗೆ ಅಬ್ಯರ್ಥಿಗಳ ಅನುಪಾತ 1:10 ರ ಬದಲಾಗಿ 1:20 (ರಿಕ್ತ ಸ್ಥಾನ : ಅಬ್ಯರ್ಥಿ) ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ / ಇತರೆ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಯಾವ ಅವಕಾಶಗಳಿವೆ ಎಂಬುದನ್ನು ತಿಳಿಯಲು ಘನ ವೇದಿಕೆಯು ಸಲಹೆ ನೀಡಿತು. **(ಕ್ರಮ: ಕುಲಸಚಿವರು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ– 1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶಿಕ್ಷಕ / ವಿಜ್ಞಾನಿ ಸಿಬ್ಬಂದಿಗಳವರ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ಹಾಗೂ ಜಾಹಿರಾತು ಹೊರಡಿಸಿದ ಅಧಿಸೂಚನೆಗೆ ಸ್ಥಿರೀಕರಿಸುವ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. **(ಕ್ರಮ: ಕುಲಸಚಿವರು)** |
| ಐಟಂ– 2 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಸ್ತಿ ಅಧಿಕಾರಿಯವರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ವಿಸ್ತೃತವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಒಂದು ಪ್ರಾಧ್ಯಾಪಕರ ಹುದ್ದೆಯನ್ನು ಪರಿವರ್ತಿಸಿ ಆಸ್ತಿ ಅಧಿಕಾರಿಯ ಹುದ್ದೆಯನ್ನು ಸೃಜಿಸಲು ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಸರಕು ಖರೀದಿ ಅಧಿಕಾರಿಗಳು)** |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 19–1–2016 | ಸಹಿ /– 19–1–2016 |
| **(ಪಿ.ಎಂ. ಸಾಲಿಮಠ)** | **(ಡಿ.ಎಂ. ಚಂದರಗಿ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.